ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕಾಶಿಇ/ಶೈವಿ/04/ಸುತ್ತೋಲೆ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಉನ್ನತ ಶಿಕ್ಷಣ ಸೌಧ ಶೇಷಾದ್ರಿ ರಸ್ತೆ
ಬೆಂಗಳೂರು. ದಿನಾಂಕ:27-09-2022

## ಸುತ್ತೋಲೆ

ವಿಷಯ: ಸೈಬರ್ ಭದ್ರತೆಯ ಜಾಗೃತಿ ಕಾರ್ಯಕ್ರಮಗಳು-ಅಕ್ಟೋಬರ್-2022 ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದ ಬಗ್ಗೆ

ಉಲ್ಲೇಖ: **CySeck, K-tech Centre of Excellence in Cyber Security** ಇವರ ಪತ್ರ ದಿನಾಂಕ:23-09-2022.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಕ್ಟೋಬರ್ ಮಾಹೆಯನ್ನು ರಾಷ್ಟ್ರೀಯ ಸೈಬರ್ ಭದ್ರತೆ ಜಾಗೃತಿ ಮಾಸವನ್ನಾಗಿ ಅಂತ್ರರಾಷ್ಟ್ರೀಯಮಟ್ಟದಲ್ಲಿ ಆಚರಿಸಲಾಗುತ್ತಿದ್ದು, ಸೈಬರ್ ಅಪಾಯಗಳು, ಸೈಬರ್ ನೈಮಲ್ಯ ಮತ್ತು ಸೈಬರ್ ಭದ್ರತೆ ಕುರಿತು ಉತ್ತಮ ಅಭ್ಯಾಸಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಸಂಸ್ಥೆಯಾದ **K-tech Centre of Excellence in Cyber Security, CySeck** ಯು ಈ ಕೆಳಕಂಡ ಸರಣಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಅಕ್ಟೋಬರ್ ಮಾಹೆಯಲ್ಲಿ ಹಮ್ಮಿಕೊಳ್ಳಲಾಗಿರುವ ಜಾಗೃತಿ ಕಾರ್ಯಕ್ರಮಗಳು ಇಂತಿವೆ:

1) ಸೈಬರ್ ಭದ್ರತೆ ಕುರಿತು ಸಾಮಾಜಿಕ ಮಾಧ್ಯಮಗಳ ಮೂಲಕ ಅಭಿಯಾನ
2) ಗೇಮಿಫಿಕೇಷನ್ ಮೂಲಕ ಸೈಬರ್ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಸಪ್ತಾಹಿಕ ಸ್ಪರ್ಧೆಗಳ ಆಯೋಜನೆ
3) 6 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಶಾಲಾ ಮಕ್ಕಳಿಗೆ ಸೈಬರ್ ಭದ್ರತೆಯ ತರಬೇತಿ, ನಂತರ ಆನ್‌ಲೈನ್ ಮೂಲಕ ಓಲಂಪಿಯಾಡ್ ಆಯೋಜನೆ
4) ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ **"Introduction to Cyber Security"** ಕುರಿತು ಆನ್‌ಲೈನ್ ಕೋರ್ಸ್
5) ಕರ್ನಾಟಕ ಸರ್ಕಾರದ ಪೋಲೀಸ್ ಇಲಾಖೆಯ ಅಧಿಕಾರಿಗಳಿಗೆ **blockchain and cryptocurrency** ಕುರಿತು ತರಬೇತಿ ಆಯೋಜನೆ
6) ಸೈಬರ್ ಭದ್ರತೆಯ ವಿವಿಧ ಆಯಾಮಗಳ ಬಗ್ಗೆ ಪಾಲಿಟೆಕ್ನಿಕ್ ಕೋರ್ಸ್‌ಗಳ ಬೋಧಕರಿಗೆ 6 ದಿನಗಳ ತಾಂತ್ರಿಕ ತರಬೇತಿ
7) ವಿವಿಧ ಸೈಬರ್ ಭದ್ರತಾ ಪರಿಹಾರಗಳ-**CYBER Maatrik** ಬಿಡುಗಡೆ ಇತ್ಯಾದಿ

Scanned with CamScanner

ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ " Introduction to Cyber Security" ಎಂಬ ಆನ್‌ಲೈನ್ ಕೋರ್ಸ್ ನಡೆಸಲು CySeck ಉನ್ನತ ಶಿಕ್ಷಣ ಇಲಾಖೆಯನ್ನು ಮನವಿ ಮಾಡುತ್ತಿದೆ. ಈ ಕೋರ್ಸ್ Cisco ಈ ಕೋರ್ಸ್ ಅನ್ನು ಒದಗಿಸಿಕೊಡುತ್ತಿದ್ದು, ವಿದ್ಯಾರ್ಥಿಗಳು 1ನೇ ಅಕ್ಟೋಬರ್ ರಿಂದ 9ನೇ ಅಕ್ಟೋಬರ್ ವರೆಗು ನೊಂದಾಯಿಸಕೊಳ್ಳಬಹುದಾಗಿದೆ ಹಾಗೂ 10 ನೇ ಅಕ್ಟೋಬರ್ ನಿಂದ 30ನೇ ಅಕ್ಟೋಬರ್ ವರೆಗೂ ಈ ಕೋರ್ಸ್ ಅನ್ನು ಪೂರ್ಣಗೊಳಸುತ್ತಾರೋ ಅವರನ್ನು ವಿಜೇತರನ್ನಾಗಿ ಘೋಷಿಸಲು ತೀರ್ಮಾನಿಸಲಾಗಿದೆ.

ಕೋರ್ಸ್ ಅನ್ನು ತೆಗೆದುಕೊಳ್ಳಲು ಬಯಸುವ ವಿದ್ಯಾರ್ಥಿಗಳು CySeck ಜಾಲತಾಣ https://cs-coe.iisc.ac.in/ ಗೆ ಭೇಟಿ ನೀಡಿ ನಿಗದಿತ ದಿನಾಂಕದೊಳಗಾಗಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ ಎಂದು CySeck ರವರು ಮನವಿ ಮಾಡಿರುತ್ತಾರೆ. ಈ ಸಂಬಂಧ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿ ಸೈಬರ್ ಭದ್ರತೆಯ ಬಗ್ಗೆ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಕರಿಸುವಂತೆ ಈ ಸುತ್ತೋಲೆಯನ್ನು ಕಾಲೇಜಿನ ಸೂಚನ ಫಲಕದಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ. ಬೆಂಗಳೂರು– ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸೂಚಿಸಿದೆ.

ಪ್ರತಿಯನ್ನು:

1. ಜಂಟಿ ನಿದೇಶಕರು ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ– ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

Scanned with CamScanner